ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯ, ಕರ್ನಾಟಕ,
4ನೇ ಬ್ಲಾಕ್, ಜಯನಗರ, ಬೆಂಗಳೂರು – 560 041
Rajiv Gandhi University of Health Sciences, Karnataka
4th 'T' Block, Jayanagar, Bangalore – 560 041

ಆರ್‌ಜಿಯು/ಎಫ್‌ಫ್/ಎಡಿಎಂ/ನರ್ಸಿಂಗ್ ವಿಭಾಗ/2017-18 18/12/2017

**ಸುತ್ತೋಲೆ**

**ಗೆ**

ಪ್ರಾಚಾರ್ಯರು
ರಾಜೀವ್ ಗಾಂಧಿ ಆರೋಗ್ಯ ವಿಶ್ವವಿದ್ಯಾನಿಲಯದಿಂದ ಸಂಯೋಜನೆಗೊಂಡ
ಎಲ್ಲಾ ನರ್ಸಿಂಗ್ ವಿದ್ಯಾಲಯಗಳು / ಸಂಸ್ಥೆಗಳು.

**ಮಾನ್ಯರೆ,**

**ವಿಷಯ:** ಅನಿವಾಸಿ ಭಾರತೀಯ ಸಮಿತಿ ವತಿಯಿಂದ ರಾಜ್ಯಾದ್ಯಂತ ಅಂತಿಮ ವರ್ಷದ ನರ್ಸಿಂಗ್ ತರಬೇತಿ ಪಡೆಯುತ್ತಿರುವ ವಿದ್ಯಾರ್ಥಿಗಳಿಗೆ ವಿದೇಶಕ್ಕೆ ತೆರಳಲು ಉದ್ದೇಶಿಸಿರುವ ಬಗ್ಗೆ.

**ಉಲ್ಲೇಖ:** ಡಾ. ಕೆ. ಮುರಳಿಧರ, ಸದಸ್ಯ ಕಾರ್ಯದರ್ಶಿ, ಅನಿವಾಸಿ ಭಾರತೀಯ ಸಮಿತಿ, ಕರ್ನಾಟಕ ಇವರ ಪತ್ರದ ದಿನಾಂಕ: 12/12/2017

* * * * * *

ಡಾ|| ಕೆ. ಮುರಳಿಧರ, ಸದಸ್ಯ ಕಾರ್ಯದರ್ಶಿ, ಅನಿವಾಸಿ ಭಾರತೀಯ ಸಮಿತಿ, ಕರ್ನಾಟಕ ರಾಜ್ಯ ಸರ್ಕಾರ ರವರ ಕೋರಿಕೆಯಂತೆ ವಿಶ್ವವಿದ್ಯಾಲಯದೊಂದಿಗೆ ಸಂಯೋಜನೆಗೊಂಡಿರುವ ನರ್ಸಿಂಗ್ ವಿದ್ಯಾಲಯಗಳಲ್ಲಿ ಅಂತಿಮ ವರ್ಷದಲ್ಲಿ ಓದುತ್ತಾ ವಿದೇಶಕ್ಕೆ ತೆರಳಲು ಉದ್ದೇಶಿಸಿರುವ ವಿದ್ಯಾರ್ಥಿಗಳಿಗೆ ಪೂರ್ವಸಿದ್ಧತೆಯನ್ನು ಒದಗಿಸುವ ಕಾರ್ಯಾಗಾರವನ್ನು ವಿಶ್ವವಿದ್ಯಾನಿಲಯ ಸಹಯೋಗದಲ್ಲಿ ಜನವರಿ 2018 ರ ಮಾಹೆಯಿಂದ ನಿರಂತರವಾಗಿ ಅಭಿಯಾನವನ್ನು ಮೊದಲ ಹಂತದಲ್ಲಿ ಬೆಂಗಳೂರು, ಮೈಸೂರು, ಮಂಗಳೂರು, ಉಡುಪಿ, ಕಾರವಾರ, ಗುಲ್ಬರ್ಗ, ಬೆಳಗಾವಿಗಳಲ್ಲಿ ಅಭಿಯಾನವನ್ನು ನಡೆಸಲು ತೀರ್ಮಾನಿಸಿರುತ್ತಾರೆ.

ಪ್ರಸ್ತುತ ಹಮ್ಮಿಕೊಂಡಿರುವ ಕಾರ್ಯಗಾರದ ಪ್ರಯೋಜನವನ್ನು ವಿಶ್ವವಿದ್ಯಾಲಯ ಮತ್ತು ಸಂಯೋಜನೆಗೊಂಡಿರುವ ನರ್ಸಿಂಗ್ ವಿದ್ಯಾಲಯಗಳು / ಸಂಸ್ಥೆಗಳು ಸಂಪೂರ್ಣ ಸಹಕಾರವನ್ನು ನೀಡುವ ನಿಟ್ಟಿನಲ್ಲಿ ಕ್ರಮಕೈಗೊಂಡು ಕಾರ್ಯಕ್ರಮವು ಯಶಸ್ವಿಯಾಗುವ ಮೂಲಕ ಅಂತಿಮ ವರ್ಷದ ವಿದ್ಯಾರ್ಥಿಗಳು ಪದವಿ ನಂತರ ಸಂಪೂರ್ಣ ಪ್ರಯೋಜನವನ್ನು ಪಡೆಯಲು ಸೂಕ್ತ ಕ್ರಮಕೈಗೊಳ್ಳಬೇಕೆಂದು ಈ ಮೂಲಕ ನಿರ್ದೇಶಿಸಲಾಗಿದೆ.

**ವಂದನೆಗಳೊಂದಿಗೆ,**

ಇಂತಿ ತಮ್ಮ ವಿಶ್ವಾಸಿ

ಕುಲಸಚಿವರು 18.1

**ಪ್ರತಿ**

1. ಡಾ|| ಕೆ. ಮುರಳಿಧರ, ಸದಸ್ಯ ಕಾರ್ಯದರ್ಶಿ, ಅನಿವಾಸಿ ಭಾರತೀಯ ಸಮಿತಿ, ಕರ್ನಾಟಕ.

**ಲಗತ್ತಿಸಿದೆ:**

2. ಉಲ್ಲೇಖಿತ ಪತ್ರವನ್ನು (ದಿ: 12/12/2017) ಪೂರ್ಣ ಮಾಹಿತಿಗಾಗಿ.

**ಡಾ. ಕೆ. ಮುರಳಿಧರ**
ಸದಸ್ಯ ಕಾರ್ಯದರ್ಶಿ
ಅನಿವಾಸಿ ಭಾರತೀಯ ಸಮಿತಿ, ಕರ್ನಾಟಕ

ಕೊಠಡಿ ಸಂ: 220E & 220F
2ನೇ ಮಹಡಿ, ವಿಕಾಸ ಸೌಧ
ಬೆಂಗಳೂರು – 560 001
ದೂರವಾಣಿ ಸಂ. : 080-22286778
ಫ್ಯಾಕ್ಸ್ : 080-22374708
ಇ-ಮೇಲ್ : memsecy@nriforumkarnataka.org
memsecy@gmail.com

ದಿನಾಂಕ:12/12/2017

ಮಾನ್ಯರೆ,

ಹೊರ ದೇಶಗಳಲ್ಲಿ ನೆಲೆಸಿರುವ ಅನಿವಾಸಿ ಭಾರತೀಯರೊಂದಿಗೆ ಸುಸ್ಥಿರವಾದ ಸಂಪರ್ಕವನ್ನು ಸಾಧಿಸುವುದು, ಈ ಸಮುದಾಯದ ಪರಸ್ಪರ ಸಹಕಾರದೊಂದಿಗೆ ರಾಜ್ಯದ ಅಭಿವೃದ್ಧಿಗೆ ಪೂರಕವಾದ ಕಾರ್ಯನಿರ್ವಹಿಸುವುದು ಸೇರಿದಂತೆ ಅನಿವಾಸಿ ಭಾರತೀಯ ಸಮುದಾಯದ ಸಮರ್ಥ ಕಲ್ಯಾಣಕ್ಕಾಗಿ ಸಮನ್ವಯ ಕಾರ್ಯವನ್ನು ಅನಿವಾಸಿ ಭಾರತೀಯ ಸಮಿತಿ, ಕರ್ನಾಟಕ ಈ ಕಚೇರಿಯು ನಿರ್ವಹಿಸುತ್ತಿದೆ. ಕರ್ನಾಟಕ ಸರ್ಕಾರದ ಅಂಗ ಸಂಸ್ಥೆಯಾಗಿರುವ ಈ ಸಮಿತಿಯ ಅಧ್ಯಕ್ಷರಾಗಿ ಮಾನ್ಯ ಮುಖ್ಯಮಂತ್ರಿಗಳು ಹಾಗೂ ಸಮಿತಿಯ ಉಪಾಧ್ಯಕ್ಷರಾಗಿ ಸಂಪುಟ ದರ್ಜೆ ಸ್ಥಾನ ಮಾನ ಹೊಂದಿರುವ ಡಾ. ಆರತಿ ಕೃಷ್ಣರವರು ಕೆಲಸ ನಿರ್ವಹಿಸುತ್ತಿದ್ದಾರೆ. ಅನಿವಾಸಿ ಭಾರತೀಯ ಸಮುದಾಯದ ಹಿತದೃಷ್ಟಿಯಲ್ಲಿ ಈ ಸಮಿತಿಯು 2016ನೇ ಇಸವಿಯಲ್ಲಿ ಕರ್ನಾಟಕದ ಅನಿವಾಸಿ ಭಾರತೀಯರ ನೀತಿಯನ್ನು ಹೊರತಂದಿದ್ದು ಈ ನೀತಿಯ ಆಶಯಕ್ಕೆ ಅನುಗುಣವಾಗಿ ಸಮಿತಿಯು ಯೋಜನೆಗಳನ್ನು ಅನುಷ್ಠಾನಗೊಳಿಸುವ ಜವಾಬ್ದಾರಿಯನ್ನು ಹೊಂದಿದೆ. ಅದೇ ಆಧಾರದ ಮೇಲೆ ಸರ್ಕಾರವು ಅನುಮೋದಿಸಿರುವ ಕ್ರಿಯಾಯೋಜನೆ ಅನುಸಾರ ಹಲವಾರು ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿರುತ್ತದೆ.

ಪ್ರಸ್ತುತ ಸಾಲಿನ ಕ್ರಿಯಾಯೋಜನೆಯಲ್ಲಿ ಸಾಗರೋತ್ತರ ದೇಶಗಳಲ್ಲಿ ಕನ್ನಡಿಗರು ಉದ್ಯೋಗ ಹೊಂದುವುದನ್ನು ಪ್ರೋತ್ಸಾಹಿಸುವ ಯೋಜನೆಯನ್ನು ಹೊಂದಿದ್ದು, ಹೊರ ದೇಶಗಳಲ್ಲಿ ಕೆಲಸ ನಿರ್ವಹಿಸಲು ಉತ್ಸುಕರಾಗಿರುವ ಯುವ ಸಮುದಾಯಕ್ಕೆ ಪೂರ್ವ ಸಿದ್ಧತೆಯ ಕುರಿತಾದ ಕಾರ್ಯಾಗಾರವನ್ನು ಹಮ್ಮಿಕೊಳ್ಳಲು ಯೋಜಿಸಲಾಗಿದೆ. ವಿದೇಶಗಳಲ್ಲಿ ಕಾರ್ಯನಿರ್ವಹಿಸಲು ಉದ್ದೇಶಿಸುವ ಯುವ ಪೀಳಗೆಯು ಖಾಸಗಿ ನೇಮಕಾತಿ ಸಂಸ್ಥೆಗಳಿಂದ ನಿರಂತರವಾಗಿ ಮೋಸ ಹೋಗುತ್ತಿರುವ ವಿಷಯವನ್ನು ಕಲ್ಪಿಸಿಕೊಂಡಾಗ ಈ ರೀತಿಯ ಕಾರ್ಯಾಗಾರಗಳು ಹೆಚ್ಚು ಮಹತ್ವವನ್ನು ಪಡೆಯುತ್ತವೆ.

ಅನಿವಾಸಿ ಭಾರತೀಯ ಸಮಿತಿಯ ವತಿಯಿಂದ ರಾಜ್ಯಾದ್ಯಂತ ನರ್ಸಿಂಗ್ ತರಬೇತಿ ಪಡೆಯುತ್ತಿರುವ, ಕೊನೆಯ ಸೆಮಿಸ್ಟರ್‌ನಲ್ಲಿ ಓದುತ್ತಾ ವಿದೇಶಕ್ಕೆ ತೆರಳಲು ಉದ್ದೇಶಿಸಿರುವ ವಿದ್ಯಾರ್ಥಿಗಳಿಗೆ ಪೂರ್ವಸಿದ್ಧತೆಯನ್ನು ಒದಗಿಸುವ ಕಾರ್ಯಾಗಾರವನ್ನು ತಮ್ಮ ವಿಶ್ವವಿದ್ಯಾನಿಲಯದ ಮತ್ತು ಸಂಬಂಧಪಟ್ಟ ಸಂಸ್ಥೆಗಳಿಗೆ ಸಹಯೋಗದಲ್ಲಿ ಜನವರಿ 2018ರ ಮಾಹೆಯಿಂದ ನಿರಂತರ ಅಭಿಯಾನವಾಗಿ ನಡೆಸಲು ಯೋಜಿಸಲಾಗಿದೆ. ಮೊದಲ ಹಂತದಲ್ಲಿ ಬೆಂಗಳೂರು, ಮೈಸೂರು, ಮಂಗಳೂರು, ಉಡುಪಿ, ಕಾರವಾರ, ಗುಲ್ಬರ್ಗ, ಬೆಳಗಾವಿಗಳಲ್ಲಿ ಈ ಅಭಿಯಾನವನ್ನು ನಡೆಸಲು ತೀರ್ಮಾನಿಸಲಾಗಿದೆ.

ಈ ಅಭಿಯಾನದ ಖರ್ಚು ವೆಚ್ಚಗಳನ್ನು ಅನಿವಾಸಿ ಭಾರತೀಯ ಸಮಿತಿಯು ವಹಿಸಿಕೊಳ್ಳುವುದಿದ್ದು, ತಾವು ಸಂಬಂಧಪಟ್ಟ ಸಂಸ್ಥೆಗಳಿಗೆ ಸಹಕಾರವನ್ನು ನೀಡುವ ನಿಟ್ಟಿನಲ್ಲಿ ಅಗತ್ಯ ನಿರ್ದೇಶನವನ್ನು ನೀಡಿ ಇಂತಹ ಮಹತ್ವದ ಕಾರ್ಯಕ್ರಮಕ್ಕೆ ಬೆಂಬಲವನ್ನು ವಿಸ್ತರಿಸಲು ಕೋರಲಾಗಿದೆ.

(6)

ವಂದನೆಗಳೊಂದಿಗೆ,

Copy to
13/12/17
13.12
DR(N)

ತಮ್ಮ ವಿಶ್ವಾಸಿ
ಸದಸ್ಯ ಕಾರ್ಯದರ್ಶಿ,
ಅನಿವಾಸಿ ಭಾರತೀಯ ಸಮಿತಿ, ಕರ್ನಾಟಕ.

ಗೆ,
ಮಾನ್ಯ ಕುಲಸಚಿವರು
ರಾಜೀವ ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾನಿಲಯ,
ಕರ್ನಾಟಕ.

1058
15/12/17